ಓ.ಎಸ್. ನಂ. 239/2018

ಪಿ.ಡಬ್ಲ್ಯೂ: 01 (ತಿಪ್ಪೇರುದ್ರಪ್ಪ)

ದಿನಾಂಕ: 01.03.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿ ಪರ – ಶ್ರೀ TMS ವಕೀಲರಿಂದ.

ದಾಸರ ಓಬಯ್ಯನ ವಿರುದ್ಧ ದಾವೆಯನ್ನು ಹೂಡಿರುತ್ತೇನೆ. ದೊಡ್ಡ ಬೋರಯ್ಯ, ಸಣ್ಣ ಬೋರಯ್ಯ, ದಾಸರ ಓಬಯ್ಯ, ಗಂಟ್ಲಯ್ಯರವರು 4 ಜನ ಒಡಹುಟ್ಟಿದವರು. ಅವರಿಗೆ ಬೋಸಮ್ಮ ಎಂಬ ಒಡಹುಟ್ಟಿದವರು ಇದ್ದಾರೆ ಎಂದರೆ ಹೌದು.

ಸರ್ವೆ ನಂಬರ್ 154ಬಿ ವಿಸ್ತೀರ್ಣ 13.64 ಎಕರೆ ಮೂಲತಃ ಸರಕಾರದ ಜಮೀನು ಎಂದರೆ ಹೌದು. ಬೋಸಮ್ಮರವರು 3 ಎಕರೆ, ದಾಸರ ಓಬಯ್ಯ 3 ಎಕರೆ, ಸಣ್ಣ ಬೋರಯ್ಯ 4.14 ಎಕರೆ, ದೊಡ್ಡ ಬೋರಯ್ಯ 3.64 ಎಕರೆಗೆ ಸಂಬಂಧಪಟ್ಟಂತೆ ತಮ್ಮಗಳ ಹೆಸರಿಗೆ ಪಟ್ಟಾ ಕೋರಿ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿಯವರು ಬಹಳ ವರ್ಷಗಳ ಕಾಲ ಉಳುಮೆ ಮಾಡುತ್ತಿದ್ದ ಕಾರಣ ಪಟ್ಟಾ ಕೋರಿರುತ್ತಾರೆ ಎಂದರೆ ಸರಿಯಲ್ಲ. ಬೋಸಮ್ಮರವರಿಗೆ 3 ಎಕರೆ, ದಾಸರ ಓಬಯ್ಯ 3 ಎಕರೆ, ದೊಡ್ಡ ಬೋರಯ್ಯ 3.64 ಎಕರೆಗೆ ಪಟ್ಟಾ ನೀಡಿರುತ್ತಾರೆ ಎಂದರೆ ಇಲ್ಲ. ಇಂದಿಗೂ ಅವರುಗಳು ಅದನ್ನು ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಈಶ್ವರಪ್ಪ 3 ಎಕರೆ, ಕುಬೇರಪ್ಪ 3 ಎಕರೆ, ನಾನು 4 ಎಕರೆ ಜಮೀನನ್ನು ಉಳುಮೆ ಮಾಡುತ್ತಿದ್ದೇವೆ. ಉಳಿದ ಜಮೀನು ಯಾರು ಸಾಗುವಳಿ ಮಾಡುತ್ತಿಲ್ಲ ಅದು ಹಾಗೆ ಇದೆ. ನಾನು ಉಳುಮೆ ಮಾಡುತ್ತಿರುವ ಜಮೀನಿನ ಪೂರ್ವಕ್ಕೆ ಬಸಮ್ಮ ಗಂಡ ಮಹಾಲಿಂಗಪ್ಪನ ಜಮೀನು, ಪಶ್ಚಿಮಕ್ಕೆ ಈಶ್ವರಪ್ಪನ ಜಮೀನು, ಉತ್ತರಕ್ಕೆ ಗಂಗಮ್ಮ ಗಂಡ ದಾಸರ ಓಬಯ್ಯರವರ ಜಮೀನು, ದಕ್ಷಿಣಕ್ಕೆ ಬಸಮ್ಮ ಗಂಡ ಮಹಾಲಿಂಗಪ್ಪರವರ ಜಮೀನು ಇದೆ.

2001 ರಲ್ಲಿ ಸಣ್ಣ ಬೋರಯ್ಯನ ವಿರುದ್ಧ ಶಾಶ್ವತ ನಿರ್ಭಂದಕಾಜ್ಞೆ ಕೋರಿ ಓ ಎಸ್ 151/2001 ರಂತೆ ದಾವೆಯನ್ನು ಸಲ್ಲಿಸಿದ್ದೆ ಎಂದರೆ ಹೌದು. ಆ ಸಮಯದಲ್ಲಿ ವಾದಿ ಹಾಗೂ ಸಣ್ಣಬೋರಯ್ಯ ಗಲಾಟೆ ಮಾಡಿದ ಸಂಬಂಧ ಅದನ್ನು ಸಲ್ಲಿಸಿರುತ್ತೇನೆ. ಸದರಿ ಓ ಎಸ್ 151/2001 ರಲ್ಲಿ ಚೆಕ್‌ಬಂದಿಯನ್ನು ಹೇಳಿ ಬರೆಸಿರುತ್ತೇನೆ. ನಾನು ಮೇಲೆ ಹೇಳಿದ ಚೆಕ್‌ಬಂದಿಯನ್ನು ಆ ದಾವೆಯಲ್ಲಿಯೂ ಸಹ ಹೇಳಿ ಬರೆಸಿರುತ್ತೇನೆ. ಈ ದಾವೆಯನ್ನು ಸಲ್ಲಿಸುವಾಗ ಚೆಕ್‌ಬಂದಿಯನ್ನು ಹೇಳಿ ಬರೆಸಿರುತ್ತೇನೆ. ಮೇಲೆ ಹೇಳಿದ ಚೆಕ್‌ಬಂದಿ ಹಾಗೂ ಈ ದಾವೆಯಲ್ಲಿ ಚೆಕ್‌ಬಂದಿ ಬೇರೆ ಬೇರೆ ಇದೆ ಎಂದರೆ ಒಂದೇ ಇದೆ. ಓ ಎಸ್ 151/2001 ರಲ್ಲಿ ಹಾಗೂ ಈ ದಾವೆಯಲ್ಲಿ ಚೆಕ್‌ಬಂದಿ ಬೇರೆ ಬೇರೆ ಇದೆ ಎಂದರೆ ಒಂದೇ ಇದೆ.

ಓ.ಎಸ್. ನಂ. 239/2018
ಪಿ.ಡಬ್ಲ್ಯು: 01 (ತಿಪ್ಪೇರುದ್ರಪ್ಪ)

ಓ ಎಸ್ 151/2001 ರಲ್ಲಿ ದಾವೆ ನನ್ನಂತೆ ಆಗಿರುತ್ತದೆ. ಆದರ ತೀರ್ಪಿನ ಪ್ರತಿ ನನ್ನ ಬಳಿ ಇದೆ. ಆದರಲ್ಲಿ ಏನೆಂದು ಆದೇಶ ಆಗಿತ್ತು ಎಂದು ನನಗೆ ಗೊತ್ತಿಲ್ಲ. ಸದರಿ ದಾವೆ 2006 ರಲ್ಲಿ ನಾನು ದಾವೆ ನಡೆಸದ ಕಾರಣ ವಜಾ ಆಗಿದೆ ಎಂದರೆ ಸರಿಯಲ್ಲ. ವಜಾ ಆದ ನಂತರ ನಾನು ಯಾವುದೇ ದಾವೆಯನ್ನು ಸಣ್ಣಬೋರಯ್ಯನ ವಿರುದ್ಧ ಹೂಡಿರುವುದಿಲ್ಲ.

ನಾನು ಮೇಲೆ ಹೇಳಿದ ಚೆಕ್‌ಬಂದಿ, ಓ ಎಸ್ 151/2001 ರಲ್ಲಿ ಹಾಗೂ ಈ ದಾವೆಯಲ್ಲಿ ಹೇಳಿರುವ ಚೆಕ್‌ಬಂದಿ ಬೇರೆ ಬೇರೆ ಇದೆ ಎಂದರೆ ಒಂದೇ ಇದೆ. 1994 ರಲ್ಲಿ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ನಮ್ಮಂತೆ ಒಟ್ಟು 13.64 ಪೈಕಿ 4 ಎಕರೆಗೆ ನನಗೆ ಪಟ್ಟಾ ನೀಡಿರುತ್ತಾರೆ. ಸದರಿ ಪಟ್ಟಾದಲ್ಲಿ ಚೆಕ್‌ಬಂದಿ ತೋರಿಸಿರುತ್ತಾರೆ. ಈಗ ನಾನು ಪಟ್ಟಾ ಪತ್ರವನ್ನು ನೋಡುತ್ತಿದ್ದು, ನನಗೆ ಓದಲು ಬರೆಯಲು ಬರದ ಕಾರಣ ಚೆಕ್‌ಬಂದಿ ತೋರಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ದಾವೆ ಹೂಡುವ ಸಮಯದಲ್ಲಿ ಪಟ್ಟಾ ಪತ್ರದಲ್ಲಿ ಚೆಕ್‌ಬಂದಿ ಇರುವ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ಈ ದಾವೆಯಲ್ಲಿ ತೋರಿಸಿರುವ ಚೆಕ್‌ಬಂದಿಯನ್ನು ಯಾವ ದಾಖಲಾತಿಯ ಆಧಾರದ ಮೇಲೆ ಬರೆಸಿರುತ್ತೇನೆ ಎಂದರೆ ನನಗೆ ಅಷ್ಟು ಗೊತ್ತಾಗುವುದಿಲ್ಲ. ನನಗೆ ನೀಡಿರುವ ಪಟ್ಟಾದಲ್ಲಿ ಚೆಕ್‌ಬಂದಿ ತೋರಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಹಾಜರುಪಡಿಸಿರುವ ದಾಖಲಾತಿಗಳಲ್ಲಿ ಚೆಕ್‌ಬಂದಿ ತೋರಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

ನಾನು ಹೇಳಿರುವ ಚೆಕ್‌ಬಂದಿ ದಾವಾ ಸ್ವತ್ತಿಗೆ ಸಂಬಂಧಪಡುತ್ತದೆ ಎಂದು ತೋರಿಸಲು ಯಾವುದೇ ಸರಕಾರಿ ದಾಖಲಾತಿಗಳು ನನ್ನ ಬಳಿ ಇಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಕೂಡ್ಲಿಗಿ.